

ಉದ್ಯೋಗದ ಸ್ಥಳಗಳಲ್ಲಿ ಹೆಣ್ಣುಮಕ್ಕಳ ಶೋಷಣೆ ಇಂದು ನಿನ್ನೆಯದಲ್ಲ. ಈವರೆಗೆ ಗುಸುಪಿಸುಗಳಾಗಿಯೇ ಉಳಿದಿದ್ದ ಸಂಕಟದ ಕಥೆಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ಒಂದೊಂದಾಗಿ ಹೊರಬೀಳುತ್ತಿವೆ. ‘ಮಿ ಟೂ’ ಎನ್ನುತ್ತ ಹೆಣ್ಣುಮಕ್ಕಳು ತಮ್ಮನ್ನು ಶೋಷಿಸಿದವರ ಕುರಿತು ಹೇಳಿಕೊಳ್ಳುತ್ತಿದ್ದರೆ, ನಮ್ಮ ನಡುವಿನ ಅನೇಕ ಸಿದ್ಧಪ್ರಸಿದ್ಧರ ಅಸಲಿ ಮುಖಗಳು ಬಯಲಾಗುತ್ತಿವೆ.